ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ.ಅರಗ ಜ್ಞಾನೇಂದ್ರ ರವರು ಮಂಡಿಸಿರುವ ವರದಿ ಸಂಖ್ಯೆ : 5247 ಕ್ಕೆ ಉತ್ತರ.

ಪ್ರಶ್ನೆ :

ಅ) ತೀರ್ಥಹಳ್ಳಿ ಪುರಪಂಚಾಯಿತಿಗೆ ಸದಸ್ಯರಾಗಿ ನಾಮ ನಿರ್ದೇಶಿಸಲ್ಪಟ್ಟಿರುವ ಶ್ರೀ ಡಿ.ಎಸ್. ವಿಶ್ವನಾಥ ಶೆಟ್ಟಿಯವರು ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಹಿರೇಕೊಡಿಗೆ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೇರೊಂದು ಜಿಲ್ಲೆಯ ಗ್ರಾಮಪಂಚಾಯತಿಯ ಸದಸ್ಯರಾಗಿರುವವರನ್ನು ತೀರ್ಥಹಳ್ಳಿಯ ಪುರ ಪಂಚಾಯತಿಗೆ ನಾಮ ನಿರ್ದೇಶನ ಸದಸ್ಯರಾಗಿ ಮುಂದುವರೆಸುತ್ತಿರುವುದು ಅಚಿತ್ಮವೇ;

ಇ) ಅನೇಕ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ಶ್ರೀ.ವಿಶ್ವನಾಥ ಶೆಟ್ಟಿಯವರ ನಾಮ ನಿರ್ದೇಶನ ಸದಸ್ಯತ್ವ ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹೌದಾದಲ್ಲಿ ಯಾವಾಗ ಕ್ರಮ ಜುರುಗಿಸಲಾಗುವುದು?

ಉತ್ತರ :

ಅ) ಹೌದು.

ಆ, ಇ) ಕರ್ನಾಟಕ ಪುರಸಭೆ ಅಧಿನಿಯಮ 1964ರ ಸೆಕ್ಷನ್-16(1)ರ ಪ್ರಕಾರ ಶ್ರೀ.ವಿಶ್ವನಾಥ ಶೆಟ್ಟರವರು ತೀರ್ಥಹಳ್ಳಿ ಪಟ್ಟಣ ಪಂಚಾಯತಿಯ ಸದಸ್ಯತ್ವಕ್ಕೆ ಅನರ್ಹರಾಗಿರುವುದಿಲ್ಲ. ಒಂದು ವೇಳೆ ಸದಸ್ಯತ್ವದಿಂದ ಅನರ್ಹಗೊಳಿಸುವಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ಆ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವುದು.